ಅಲ್ಲಿಗೂ ಇದನ್ನು ವಿಸ್ತರಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ್: ನಗರ ಪ್ರದೇಶಗಳಲ್ಲಿ task force committee ಅನ್ನು ಮಾಡಲಿಕ್ಕೆ...

ಅಧ್ಯಕ್ಷರು: ನಗರ ಪ್ರದೇಶಗಳಲ್ಲಿ ಮಾಡಬೇಕೆಂದು ಕೇಳುತ್ತಿದ್ದಾರೆ. ಹಿಂದೆ ರಚನೆಯಾಗಿದ್ದದ್ದು ಗ್ರಾಮಾಂತರ ಪ್ರದೇಶಕ್ಕೆ ಮಾತ್ರ. ಈಗ ನಗರ ಪ್ರದೇಶಗಳಲ್ಲೂ ಆಗಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಎಸ್.ಎ.ರವೀಂದ್ರನಾಥ್: ಅದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮಾಡುತ್ತೇವೆ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೇ, ಅದು ಅವರಿಗೆ ಬರುವುದಿಲ್ಲ. ಅದನ್ನು ಮುಖ್ಯಮಂತ್ರಿಗಳೇ ಹೇಳಬೇಕು.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇಲ್ಲಿಗೆ ಈ ಪ್ರಶ್ನೆ ಮುಗಿಯಿತು.

* * * * *

ಅಧ್ಯಕ್ಷರು: ನಿರಾಣಿ ಮುರುಗೇಶ್ ರುದ್ರಪ್ಪನವರೆ, ನಿಮ್ಮ ಪ್ರಶ್ನೆ ಸಂಖ್ಯೆ 211ಕ್ಕೆ ಉತ್ತರ ಕೊಡಲು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈಗ ಇಲ್ಲಿ ಇಲ್ಲ. ಆದ್ದರಿಂದ ಇನ್ನೊಂದು ದಿವಸ ಅದಕ್ಕೆ ಉತ್ತರವನ್ನು ಕೊಡಿಸುತ್ತೇನೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) <u>ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:</u>

ಶ್ರೀ ಕೆ.ಎಸ್.ಈಶ್ವರಪ್ಪ (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 20–03–2007ರ 14ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 7 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 105 ಪ್ರಶ್ನೆಗಳ ಪೈಕಿ 44 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ದಿನಾಂಕ 21–03–2007ರ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 15ನೇ ಪಟ್ಟಿಯಲ್ಲಿರುವ 47 ಪ್ರಶ್ನೆಗಳ ಪೈಕಿ 29 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>ಅನುಬಂಧ–1</u>

ಸಭಾಧ್ಯಕ್ಷರು: ಮಂಡಿಸಲಾಯಿತು

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 9 ಮತ್ತು 10 ಹಾಗೂ ಅನುಸೂಚಿ II ಮತ್ತು IIIಕ್ಕೆ ತಿದ್ದುಪಡಿ ಮಾಡಿ ದಿನಾಂಕ 25.01.2007ರಂದು ಹೊರಡಿಸಲಾದ ಅಧಿಸೂಚನೆ

ಸಂಖ್ಯೆ: ಡಿಪಿಎಆರ್ 10 ಎಸ್‌ಡಿಇ 2006ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)–ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರ) ಪರವಾಗಿ:–

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆ ಕಲಂ 15(3)ರ ಪ್ರಕರಣದ ಮೇರೆಗೆ:

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಅಧಿನಿಯಮದ ಪ್ರಕರಣ 5(1)ರಡಿಯ ಅಧಿಕಾರ ಚಲಾಯಿಸಿ ತಕ್ಷಣದಿಂದ ಜಾರಿಗೆ ಬರುವಂತೆ 2007ರ ಏರೋ ಇಂಡಿಯಾ ಪ್ರದರ್ಶನದ ಉದ್ದೇಶಕ್ಕಾಗಿ ಯಾವುದೇ ಅಧಿಸೂಚಿತ ಸರಕುಗಳ ಸ್ಥಳೀಯ ಪ್ರದೇಶದೊಳಗಿನ ಪ್ರವೇಶದ ಮೇಲೆ ಕೆಲವು ಷರತ್ತುಗಳಿಗೊಳಪಟ್ಟು ಯಾವುದೇ ಅಮದುದಾರರು ಪಾವತಿಸಬೇಕಾದ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ 13.02.2007ರಂದು ಹೊರಡಿಸಲಾದ ಎಫ್‌ಡಿ 29 ಸಿಇಎಕ್ಸ್ 2006ನೇ ಸಂಖ್ಯೆಯ ಅಧಿಸೂಚನೆ.

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ:

ಹೊಸ ಕೈಗಾರಿಕಾ ನೀತಿಯನ್ವಯ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರವೇಶ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 17.01.2007ರಂದು ಹೊರಡಿಸಲಾಧ ಎಫ್‌ಡಿ 29 ಸಿಇಟಿ 2006(1)ನೇ ಸಂಖ್ಯೆಯ ಅಧಿಸೂಚನೆ.

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆ ಕಲಂ 15(3)ರ ಪ್ರಕರಣದ ಮೇರೆಗೆ:

2004ರ ಹೊಸ ಕೈಗಾರಿಕಾ ನೀತಿಯನ್ವಯ ಸಾರ್ವಜನಿಕ ಹಿತದೃಷ್ಟಿಯಿಂದ ವಿಶೇಷ ಪ್ರವೇಶ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 17.01.2007ರಂದು ಹೊರಡಿಸಲಾದ ಎಫ್‌ಡಿ 29 ಸಿಇಟಿ 2006(2)ನೇ ಸಂಖ್ಯೆಯ ಅಧಿಸೂಚನೆ.

1959ರ ಕರ್ನಾಟಕ ಮನರಂಜನಾ ತೆರಿಗೆ ಕಾಯ್ದೆ 18ರ ಪ್ರಕರಣದ ಮೇರೆಗೆ

1959ರ ಕರ್ನಾಟಕ ಮನರಂಜನಾ ತೆರಿಗೆ ನಿಯಮಗಳ ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ. 8.11.2006ರಂದು ಹೊರಡಿಸಲಾದ ಎಫ್‌ಡಿ 54 ಸಿಇಎಕ್ಸ 2005ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

III ಶ್ರೀ ಎಂ.ಪಿ. ಪ್ರಕಾಶ(ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಗೂ ಸಂಸದೀಯ ವ್ಯವಹಾರಗಳ ಸಚಿವರುಗಳು) ಅವರು;

1954ರ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ 20ರ ಪ್ರಕರಣದ ಮೇರೆಗೆ:

ಬಳ್ಳಾರಿ ಜಿಲ್ಲೆ ದೋಣಿಮಲೈನಲ್ಲಿರುವ ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಆಡಿಟೊರಿಯಂನಲ್ಲಿ ಪ್ರತಿ ಶನಿವಾರ ಮತ್ತು ಭಾನುವರ ಹಾಗೂ ಸಾರ್ವತ್ರಿಕ ರಜಾ ದಿನಗಳಿಗೆ ಮಾತ್ರ ಸೀಮಿತಗೊಳಿಸಿ ದಿನಾಂಕ.01.01.2007ರಿಂದ 31.03.2007ರವರೆಗೆ 35 ಎಂಎಂ ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡಿ ದಿನಾಂಕ.24.01.2007ರಂದು ಹೊರಡಿಸಲಾದ ಹೆಚ್‌ಡಿ 42 ಸಿಎನ್‌ಎ 2006ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ(ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಗೂ ಸಂಸದೀಯ ವ್ಯವಹಾರಗಳ ಸಚಿವರು–IV ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ:–

2005ರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 33(2)ರ ಪ್ರಕರಣದ ಮೇರೆಗೆ:

2005ರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸಿ ದಿನಾಂಕ.01.02.2007ರಂದು ಹೊರಡಿಸಲಾದ ಗ್ರಾಅಪ 41 ರಾಗ್ರಾಉ 2006ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿ) ಅವರು:–
1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾದಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ:
1. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ಲೆಕ್ಕ ತನಿಖಾ ವರದಿ.
1964ರ ಬೆಂಗಳೂರು ಜಲಮಂಡಳಿಯ ಅಧಿನಿಯಮ 17(1)ರ ಪ್ರಕರಣದ ಮೇರೆಗೆ:
1. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ 2005–06ನೇ ಸಾಲಿನ ಲೆಕ್ಕ ಮತ್ತು ಲೆಕ್ಕಪರಿವೀಕ್ಷಕರ ವರದಿಯನ್ನು ಮಂಡಿಸುತ್ತೇನೆ.
ಶ್ರೀ ಎಂ. ಪಿ. ಪ್ರಕಾಶ್, (ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು–ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) ಪರವಾಗಿ:
1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:
1. ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.